**ಓ.ಎಸ್. ನಂ. 100/2017        ಪಿ.ಡಬ್ಲೂ-1                  ಹೆಸರು - ಪ್ರೇಮ**

**ಸಾಕ್ಷಿಯನ್ನು ದಿನಾಂಕಃ 12.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಆರ್ ಎಂ ಎಸ್ ವಕೀಲರಿಂದಃ-**

ನಾನು ತಾಂಡವಪುರದಲ್ಲಿ ವಾಸವಾಗಿದ್ದೇನೆ. ನಾನು ವಿವಾಹವಾಗಿದ್ದಾಗಿನಿಂದಲೂ ತಾಂಡವಪುರದಲ್ಲಿ ವಾಸವಾಗಿದ್ದೇನೆ. ನನ್ನ ತಂದೆ 1991 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ 2009 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ 05 ಜನ ಮಕ್ಕಳು. ನನ್ನ ತಂದೆಗೆ ವಾದಿಯರಾದ ನಾವು 03 ಮಂದಿ ಹೆಣ್ಣು ಮಕ್ಕಳಿದ್ದು, ಚೆನ್ನಪ್ಪ ಮತ್ತು ರಾಜು ಎಂಬ ಇಬ್ಬರು ಗಂಡು ಮಕ್ಕಳಿದ್ದು, ನನ್ನ ಇಬ್ಬರೂ ಸಹೋದರರು ಮೃತಪಟ್ಟಿರುತ್ತಾರೆ. ನನ್ನ ಅಣ್ಣನಾದ ಚೆನ್ನಪ್ಪರವರು 2008 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಮತ್ತೊಬ್ಬ ಅಣ್ಣನಾದ ರಾಜುರವರು 2009 ರಲ್ಲಿ ಮೃತಪಟ್ಟಿರುತ್ತಾರೆ. ರಾಜು ರವರಿಗೆ 2 ನೇ ಪ್ರತಿವಾದಿಯಾದ ಪತ್ನಿ ಮತ್ತು ಒಬ್ಬಳು ಸಿಂಚನ ಎಂಬ ಮಗಳಿದ್ದಾಳೆ. ನನ್ನ ಅಣ್ಣನಾದ ರಾಜುರವರ ಮಗಳಾದ ಸಿಂಚನರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.  ಸದರಿರವರನ್ನು ಸೇರಿಸಲು ಯಾವುದೇ ತೊಂದರೆ ಇಲ್ಲ. 1 ನೇ ವಾದಿಯಾದ ರತ್ನಮ್ಮರವರ ವಿವಾಹವಾಗಿ ಸುಮಾರು 45 ವರ್ಷಗಳಾಗಿದೆ. ವಿವಾಹವಾದಾಗಿನಿಂದ 1 ನೇ ವಾದಿ ಕೀರಣಪುರ ಗ್ರಾಮದಲ್ಲಿಯೇ ವಾಸವಾಗಿದ್ದಾರೆ. 2 ನೇ ವಾದಿಯಾದ ಭಾಗ್ಯಮ್ಮರವರ ವಿವಾಹವಾಗಿ ಸುಮಾರು 36 ವರ್ಷಗಳಾಗಿದೆ. ವಿವಾಹವಾದಾಗಿನಿಂದ 2 ನೇ ವಾದಿ ತಳೂರು ಗ್ರಾಮದಲ್ಲಿಯೇ ವಾಸವಾಗಿದ್ದಾರೆ. ನನ್ನ ವಿವಾಹ 1992 ರಲ್ಲಿ ಏರ್ಪಟ್ಟಿದ್ದು, ನನ್ನ ಪತಿಯ ಗ್ರಾಮ ಪುಟ್ಟೇಗೊಂಡನಹಳ್ಳಿ ಪಾಳ್ಯವಾಗಿದೆ. ನನ್ನ ವಿವಾಹದ ನಂತರ ನಾನು ತಾಂಡವಪುರದಲ್ಲಿಯೇ ವಾಸಿಸುತ್ತಿದ್ದೇನೆ. ನಾನು ನನ್ನ ಪತಿಯ ಗ್ರಾಮದಲ್ಲಿ ವಾಸವಿಲ್ಲ.

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ಅಣ್ಣನಾದ ಚೆನ್ನಪ್ಪ ಸ್ವಲ್ಪ ದಿನಗಳ ಕಾಲ ಹೋಟೆಲ್ ನಡೆಸುತ್ತಿದ್ದರು. ಚೆನ್ನಪ್ಪ ಹೋಟೆಲನ್ನು ನಡೆಸುತ್ತಿದ್ದು, ರಾಮನ್ ಬೋರ್ಡ್ ಕಾರ್ಖಾನೆಯ ಕಾರ್ಮಿಕರಿಗೆ ಟೀ ಮತ್ತು ತಿಂಡಿಯನ್ನು ಸರಬರಾಜು ಮಾಡುತ್ತಿದ್ದರು ಎಂದರೆ ಸಾಕ್ಷಿ ನಾವೆಲ್ಲರೂ ಸೇರಿ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. ಹೋಟೆಲನ್ನು ಚೆನ್ನಪ್ಪ ಒಬ್ಬರೇ ಮಾಡುತ್ತಿದ್ದು, ಅದರಿಂದ ಆದಾಯ ಗಳಿಸುತ್ತಿದ್ದರು ಎಂದರೆ ಸರಿಯಲ್ಲ.  ಸದರಿ ಆದಾಯದಿಂದ ಚೆನ್ನಪ್ಪ ದಾವಾ ಅನುಸೂಚಿತ 3 ನೇ ಖಂಡಿಕೆಯ ನಿವೇಶನವನ್ನು ಖರೀದಿಸಿದ್ದರು ಎಂದರೆ ಸಾಕ್ಷಿ ಒಟ್ಟು ಕುಟುಂಬದಿಂದ ಖರೀದಿಸಿದ್ದರು ಎಂದು ಹೇಳುತ್ತಾರೆ. ಸದರಿ ನಿವೇಶನವನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿಲ್ಲ ಎಂದರೆ ಸರಿಯಲ್ಲ.  ಕ್ರಯಕ್ಕೆ

ಪಡೆದಾಗಿನಿಂದ ಚೆನ್ನಪ್ಪರವರೇ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿಯಲ್ಲ. ಚೆನ್ನಪ್ಪರವರ ಮರಣದ ನಂತರ 3 ನೇ ಖಂಡಿಕೆಯ ಸ್ವತ್ತಿನ ಸ್ವಾಧೀನತೆ 1 ನೇ ವಾದಿಯ ವಶದಲ್ಲಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**